ಡಾ|| ಬಿ. ಬಸವರಾಜು ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪ್ರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ.

ಫ್ಯಾಕ್ಸ್ ಸಂಖ್ಯೆ: 080-22251011
ಕಛೇರಿ ದೂರವಾಣಿ: 080-22353991
ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಗೇಟ್, ಮೊದಲನೇ ಮಹಡಿ
ಎಂ.ಎಸ್. ಬಿಲ್ಡಿಂಗ್, ಬೆಂಗಳೂರು – 560 001
ಇಮೇಲ್: prlsecy-wc@karnataka.gov.in

ಅ.ಸ.ಸಂಖ್ಯೆ:ಐಸಿಪಿಎಸ್/ಚೈಲ್ಡ್-50/2015-16

ದಿನಾಂಕ: 19-07-2017

ಮಾನ್ಯರೇ,

ವಿಷಯ: ಮಕ್ಕಳ ಸಹಾಯವಾಣಿಯ ಕುರಿತು ಗೋಡೆ ಬರಹದ ಮುಖಾಂತರ ವ್ಯಾಪಕ ಪ್ರಚಾರ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ:13-02-2017 ರಂದು ನಡೆದ ರಾಜ್ಯ ಮಟ್ಟದ ಚೈಲ್ಡ್ ಲೈನ್ ಸಲಹಾ ಮಂಡಳಿ ಸಭೆಯ ಸಭಾ ನಡವಳಿಗಳಂತೆ.

* * * * * *

ಮಕ್ಕಳ ಸಹಾಯವಾಣಿಯು ಕಳೆದು ಹೋದ ಮಕ್ಕಳ, ಮಾನಸಿಕ ಹಾಗೂ ದೈಹಿಕ ಕಿರುಕುಳಕ್ಕೆ ಒಳಗಾದ ಮಕ್ಕಳು, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಹಾಗೂ ಆಶ್ರಯ ಕೋರಿ ಬರುವ ಮಕ್ಕಳಿಗೆ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಾರೆ. ಈ ಸಂಸ್ಥೆಯ ಸಹಾಯ ಪಡೆಯಬೇಕಿದ್ದಲ್ಲಿ ಅಥವಾ ಸಾರ್ವಜನಿಕರು ಈ ಸೇವೆಯನ್ನು ಬಳಸಿಕೊಳ್ಳಬೇಕಾದಲ್ಲಿ ಸಹಾಯವಾಣಿ ಕುರಿತಾದ ಮಾಹಿತಿ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯತೆ ಇರುತ್ತದೆ.

ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ನೀಡಿ ಕೈಗೆತ್ತಿಕೊಳ್ಳುವ ಎಲ್ಲಾ ಸರ್ಕಾರಿ ಕಟ್ಟಡಗಳು, ಹೊರ ಭಾಗದಲ್ಲಿ ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಗೋಡೆಗಳ ಮೇಲೆ ಹಾಗೂ ಇನ್ನಿತರ ಸರ್ಕಾರಿ ಕಟ್ಟಡಗಳ ಗೋಡೆಗಳ ಮೇಲೆ ಬರಹಗಳನ್ನು ಬರೆಸುವ ಮುಖಾಂತರ ವ್ಯಾಪಕ ಪ್ರಚಾರ ನೀಡಲು ತಮ್ಮ ಹಂತದಲ್ಲಿ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೋರಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

22/7/17

(ಡಾ|| ಬಿ. ಬಸವರಾಜು)

ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ
ಜಿಲ್ಲಾ ಪಂಚಾಯಿತಿ,

ಪ್ರತಿಯನ್ನು:

1. Head, South Regional Resource Center Child Line India Foundation, T Nagar, Chennai-600017 ಮಾಹಿತಿಗಾಗಿ ಸಲ್ಲಿಸಿದೆ.
2. ಎಲ್ಲಾ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಮಾಹಿತಿಗಾಗಿ ಸಲ್ಲಿಸಿದೆ.

# ಚೈಲ್ಡ್ ಲೈನ್ (ಮಕ್ಕಳ ಸಹಾಯವಾಣಿ):

18 ವರ್ಷದೊಳಗಿನ ಮಕ್ಕಳು ಯಾವುದೇ ರೀತಿಯ ಸಂಕಷ್ಟ, ತೊಂದರೆ, ದೈಹಿಕ/ಮಾನಸಿಕ ಶಿಕ್ಷೆ, ಹಿಂಸೆ/ನಿರ್ಲಕ್ಷ್ಯ/ತಾರತಮ್ಯ ಹಾಗೂ ಲೈಂಗಿಕ ಆಧಾರಿತ ಯಾವುದೇ ರೀತಿಯ ಶೋಷಣೆಗೆ ಒಳಗಾದರೆ ತಕ್ಷಣ

## ಚೈಲ್ಡ್ ಲೈನ್‌ಗೆ ಕರೆ ಮಾಡಿ: 1098 ಅಥವಾ 112.

ಯಾವುದೇ ಮಕ್ಕಳು ಓಡಿಹೋದರೆ, ಕಾಣೆಯಾದರೆ, ಕಳ್ಳ ಸಾಗಾಣಿಕೆಗೆ ಒಳಪಟ್ಟರೆ, ದೌರ್ಜನ್ಯಕ್ಕೊಳಗಾದರೆ, ಜೀತ ಪದ್ಧತಿಯಲ್ಲಿದ್ದರೆ, ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿಯಲ್ಲಿದ್ದರೆ, ಬಾಲ್ಯ ವಿವಾಹದ ಸಿದ್ಧತೆ ಅಥವಾ ಬಾಲ್ಯ ವಿವಾಹ ನಡೆಸಿದಲ್ಲಿ, ಭಿಕ್ಷಾಟನೆಯಲ್ಲಿದ್ದರೆ, ಬೀದಿಯಲ್ಲಿದ್ದರೆ, ನಿರಂತರ ಶಾಲೆಗೆ ಗೈರು ಹಾಜರಾದರೆ, ಯಾವುದೇ ವಿಪತ್ತಿಗೆ ಒಳಗಾದರೆ, ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದ್ದರೆ, ಹಾಗೂ ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಗಾದರೆ ಅವರ ಸಂರಕ್ಷಣೆಗಾಗಿ

## ತಕ್ಷಣ ಕರೆ ಮಾಡಿ; 1098. ತುರ್ತು ರಕ್ಷಣೆಗಾಗಿ 112

(ಈ ದೂರವಾಣಿ ಉಚಿತ ಹಾಗೂ ದೂರು ನೀಡಿದವರ ವಿವರ ಖಂಡಿತ ಬಹಿರಂಗವಾಗುವುದಿಲ್ಲ, ಗೌಪ್ಯತೆಯನ್ನು ಕಾಪಾಡಲಾಗುವುದು).

**ಹೆಚ್ಚಿನ ಮಾಹಿತಿ ಮತ್ತು ದೂರು ನೀಡಲು ಇವರನ್ನು ಸಂಪರ್ಕಿಸಿ:**

ಜಿಲ್ಲಾ ಮಕ್ಕಳ ರಕ್ಷಣಾ ಘಟಕ:____________________ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ:______

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ:________________

ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿ:______________________

ತಾಲೂಕು ಮಕ್ಕಳ ರಕ್ಷಣಾಧಿಕಾರಿ (ಶಿಶು ಅಭಿವೃದ್ಧಿ ಯೋಜನಾಧಿಕಾರಿ):________

ತಾಲೂಕು ಕಾನೂನು ಸೇವಾ ಪ್ರಾಧಿಕಾರ:________________

ಸಖಿ (ಮಹಿಳಾ ಸಹಾಯವಾಣಿ (ಸಾಂತ್ವನ) ಕೇಂದ್ರ):______________________

**ಮುಖ್ಯೋಪಾಧ್ಯಯರು/ಪ್ರಾಂಶುಪಾಲರು/ನಿಲಯ ಪಾಲಕರು/ ಮೇಲ್ವಿಚಾರಕರು/ಮುಖ್ಯಸ್ಥರು/ಆಡಳಿತ ಮಂಡಳಿ.**

**ಸಂಸ್ಥೆಯ/ಇಲಾಖೆಯ ಹೆಸರು:**____________________________________________________

***ಸೂಚನೆ:*** **1. ಮೇಲಿನಂತೆ 1098 ಅಥವಾ 112 ಬೋರ್ಡ್‌ನ್ನು ಎಲ್ಲಾ ಶಾಲೆ/ವಸತಿನಿಲಯ/ಶಿಕ್ಷಣ ಸಂಸ್ಥೆ/ ಅಂಗನವಾಡಿ/ಎಲ್ಲಾ ಸರಕಾರಿ/ವಿವಿಧ ಇಲಾಖೆಗಳ ಅಥವಾ ಅರೆ ಸರಕಾರಿ ಕಛೇರಿಗಳ ಮುಂಭಾಗದಲ್ಲಿ ಎಲ್ಲಾ ಸಾರ್ವಜನಿಕರಿಗೆ/ಮಕ್ಕಳಿಗೆ ಕಾಣುವಂತೆ ಟಿನ್‌ನ ಬೋರ್ಡ್‌ನಲ್ಲಿ/ಕಟ್ಟಡದ ಗೋಡೆಯಲ್ಲಿ ಶಾಶ್ವತವಾಗಿ ಎಲ್.ಎಮ್.ಎಲ್ ಬಣ್ಣದಲ್ಲಿ ಬರೆಸಬೇಕು.**

**2. ಮೇಲಿನ ಇಲಾಖೆಗಳ ದೂರವಾಣಿ ಸಂಖ್ಯೆಗಳನ್ನು ನಿಮ್ಮ ಜಿಲ್ಲಾ ವ್ಯಾಪ್ತಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿಯಿಂದ ಪಡೆಯುವುದು.**

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ:ಎಡಿಎಂ-2[4]ಗೋ.ಮ..ಸ-23/2021-22 ದಿನಾಂಕ: 09-08-2021

## ಸುತ್ತೋಲೆ

ವಿಷಯ: ಮಕ್ಕಳ ಸಹಾಯವಾಣಿ-1098 ಕುರಿತು ಗೋಡೆ ಬರಹ ಬರೆಸುವ ಬಗ್ಗೆ

ಉಲ್ಲೇಖ: ಯೋಜನಾ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಐಸಿಪಿಎಸ್/ಇಇಸಿ/ಎಂಸಿಎ/45/2020-21 ದಿನಾಂಕ: 23-06-2021

******

ವಿಷಯಕ್ಕೆ ಸಂಬಂಧಿಸಿದಂತೆ, ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ನಿರ್ಲಕ್ಷತೆಗೊಳಗಾದ, ಪರಿತ್ಯಜಿಸಲ್ಪಟ್ಟ ಒಪ್ಪಿಸಲ್ಪಟ್ಟ, ದೌರ್ಜನ್ಯಕ್ಕೆ ಒಳಗಾದ, ಶೋಷಣೆಗೆ ಒಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿಗೆ ತಲುಪದಿರುವಂತೆ ತಡೆಯಲು ಹಾಗೂ ಇಂಥಹ ಪ್ರಕರಣವನ್ನು ಕಡಿಮೆಗೊಳಿಸಲು ಮತ್ತು ಸಂಕಷ್ಟದಲ್ಲಿರುವ ಮಕ್ಕಳ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶವನ್ನು ಹೊಂದಿರುತ್ತದೆ ಹಾಗೂ ದತ್ತು ಕುರಿತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿದೆ.

ಈ ಸಂಬಂಧ ರಾಷ್ಟ್ರವ್ಯಾಪಿಯಲ್ಲಿ ಚಾಲ್ತಿಯಲ್ಲಿರುವ ಮಕ್ಕಳ ಸಹಾಯವಾಣಿ 1098 ಸಂಕಷ್ಟದಲ್ಲಿ ಸಿಲುಕಿರುವ ರಕ್ಷಣೆ ಮತ್ತು ಪೋಷಣೆಗೆ ಅವಶ್ಯಕತೆ ಇರುವ ಮಕ್ಕಳಿಗೆ ತುರ್ತುಸೇವೆಯನ್ನು ಒದಗಿಸಲು ಈ ಸಂಖ್ಯೆಗೆ ಕರೆ ಮಾಡುವ ಮೂಲಕ ನೆರವು ಪಡೆಯಬಹುದಾಗಿದೆ. ಈ ಸಂಖ್ಯೆಯು ಉಚಿತ ದೂರವಾಣಿಯಾಗಿದ್ದು ಮಕ್ಕಳಾಗಲಿ ಅಥವಾ ಸಾರ್ವಜನಿಕರಾಗಲಿ ಕರೆ ಮಾಡುವ ತುರ್ತು ನೆರವು ಅಗತ್ಯವಿರುವ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಬಹುದಾಗಿದೆ.

ಈ ಸಂಬಂಧ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸಬೇಕಾಗಿರುವುದರಿಂದ ಎಲ್ಲಾ ಶಾಲೆಗಳ ಗೋಡೆಗಳ ಮೇಲೆ ಮಕ್ಕಳ ಸಹಾಯವಾಣಿ 1098 ನ್ನು ಕುರಿತು ಗೋಡೆ ಬರಹಗಳನ್ನು ಬರೆಸಲಾಗುತ್ತಿದೆ. ಕೆಲವು ಶಾಲೆಗಳಲ್ಲಿ ಹಳೆಯದಾಗಿದ್ದು, ಬಣ್ಣ ಹೋಗಿರುತ್ತದೆ. ಉಳಿದಂತೆ ಕೆಲವು ಶಾಲೆಗಳಲ್ಲಿ ಸುಣ್ಣಬಣ್ಣ ಮಾಡಿದ್ದು, ಮಾಹಿತಿಯು ಅಳಿಸಿ ಹೋಗಿರುತ್ತದೆ ಹಾಗೂ ಹೊಸ ಕಟ್ಟಡಗಳಲ್ಲಿ ಬರೆದಿರುವುದಿಲ್ಲವೆಂದು ಮಕ್ಕಳ ರಕ್ಷಣಾ ನಿರ್ದೇಶನಾಲಯದ ಪತ್ರದಲ್ಲಿ ತಿಳಿಸಿದೆ.

ಆದ್ದರಿಂದ ಮತ್ತೊಮ್ಮೆ ಬರೆಸಬೇಕಾಗಿರುವುದರಿಂದ ಶಿಕ್ಷಣ ಇಲಾಖೆಯಡಿಯಲ್ಲಿ ಶಾಲೆಗಳ ಗೋಡೆಗಳ ಮೇಲೆ ಮಕ್ಕಳ ಸಹಾಯವಾಣಿ 1098 ನ್ನು ಗೋಡೆಯ ಮೇಲೆ ಬರೆಸುವಂತೆ ಮಕ್ಕಳ ಡೈರಿಗಳಲ್ಲೂ ಹಾಗೂ ಪಠ್ಯಪುಸ್ತಕದ ಮೇಲ್ಭಾಗದಲ್ಲಿ ಅಂಟಿಸುವ ನೇಮ್‌ಲಿಸ್ಟ್‌ಗಳ ಮಕ್ಕಳ ಸಹಾಯವಾಣಿ ಮುದ್ರಣಗೊಳಿಸಿ/ಅಗತ್ಯವಾದ ನೆರವಾಗಲು ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಸುತ್ತೋಲೆಯನ್ನು ಹೊರಡಿಸಲು ಉಲ್ಲೇಖಿತ ಪತ್ರದಲ್ಲಿ ನಿರ್ದೇಶನವಿರುತ್ತದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಹಳೆಯ ಶಾಲೆಗಳಲ್ಲಿರುವ ಹಾಗೂ ಹೊಸ ಶಾಲೆಗಳಲ್ಲಿನ ಗೋಡೆಗಳ ಮೇಲೆ ಮಕ್ಕಳ ಸಹಾಯವಾಣಿ 1098 ನ್ನು ಗೋಡೆಗಳಲ್ಲಿ ಬರೆಸುವಂತೆ ಮಕ್ಕಳ ಡೈರಿಗಳಲ್ಲಿ ಪಠ್ಯಪುಸ್ತಕದ ಮೇಲ್ಭಾಗದಲ್ಲಿ ಅಂಟಿಸುವ ನೇಮ್ ಲಿಸ್ಟ್‌ಗಳ ಮೇಲೆ ಮಕ್ಕಳ ಸಹಾಯವಾಣಿ 1098 ನ್ನು ಮುದ್ರಣಗೊಳಿಸಿ/ ಆಕರ್ಷಕವಾದ ಸೀಲ್ ಹಾಕಲು ಸಂಬಂಧಿಸಿದ ರಾಜ್ಯದ ಎಲ್ಲಾ ಸರ್ಕಾರಿ/ ಖಾಸಗಿ ಶಾಲಾ ಮುಖ್ಯಶಿಕ್ಷಕರಿಗೆ ಸೂಕ್ತ ಕ್ರಮವಹಿಸಲು ಸೂಚಿಸುವಂತೆ ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಸೂಕ್ತಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ, ಉಪನಿರ್ದೇಶಕರು (ಆಡಳಿತ) ಇವರ ಮುಖಾಂತರ ಇವರಿಗೆ ಸೂಕ್ತಕ್ರಮಕ್ಕಾಗಿ

ಪ್ರತಿಯನ್ನು

1. ಯೋಜನಾ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮೂರನೇ ಮಹಡಿ, ಚಿಕ್ಕಗೋಪುರ, ಬೆಂಗಳೂರು-01 ಇವರಿಗೆ ಮಾಹಿತಿಗಾಗಿ
2. ಕಛೇರಿ ಪ್ರತಿ

ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001.

E-mail ID: icpssarakar@gmail.com    Ph.No.080-22879382

ಸಂಖ್ಯೆ: ಐಸಿಪಿಎಸ್/ದತ್ತು-19/2018-19    ದಿನಾಂಕ: 14-08-2019

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: ಮಕ್ಕಳ ಸಹಾಯವಾಣಿ 1098ಗೆ ಸಂಬಂಧಿಸಿದ ಮಾಹಿತಿಗಳನ್ನು ಅಳವಡಿಸುವ ಬಗ್ಗೆ.

ಉಲ್ಲೇಖ: ದಿನಾಂಕ: 30.11.2018 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಂತೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತೊಂದರೆಯಲ್ಲಿರುವ ಮಕ್ಕಳಿಗೆ ಮಕ್ಕಳ ಸಹಾಯವಾಣಿಯು 24 ಗಂಟೆಗಳ ಉಚಿತ, ಉಪಚಾರ ಮತ್ತು ಸಂರಕ್ಷಣೆಯನ್ನು ಒದಗಿಸುವುದರೊಂದಿಗೆ 1098 ತುರ್ತು ಸಂಪರ್ಕ ದೂರವಾಣಿ ಸೇವೆಯಾಗಿದೆ. ಅಲ್ಲದೆ ಭಾರತದ ಯಾವುದೇ ದೂರವಾಣಿ ಸೇವೆಯಿಂದ ಸಂಕಷ್ಟದಲ್ಲಿರುವ ಮಗು ಅಥವಾ ಕಾಳಜಿ ಹೊಂದಿದ ದೊಡ್ಡವರು 1098 ಕ್ಕೆ ಉಚಿತವಾಗಿ ಕರೆ ಮಾಡಿದಾಗ ಚೈಲ್ಡ್ ಲೈನ್ ಗುಂಪು ಮಗುವಿನ ನೆರವಿಗೆ ಧಾವಿಸಿ, ಮಗುವಿಗೆ ಅವಶ್ಯವಿರುವ ಪುನರ್ವಸನ ಹಾಗೂ ನಿರಂತರ ಅನುಸರಣೆಯನ್ನು ಒದಗಿಸಲಾಗುತ್ತದೆ.

ಆದ್ದರಿಂದ ಸಂಕಷ್ಟದಲ್ಲಿರುವ ಮಕ್ಕಳಿಗೆ ನೆರವಾಗಲು 1098ಗೆ ಕರೆ ಮಾಡಿ ಮಾಹಿತಿಯನ್ನು ನೀಡುವ ಸಂಬಂಧ ತಮ್ಮ ಇಲಾಖೆಯ ವಸತಿಗೃಹಗಳಲ್ಲಿ ಗೋಡೆ ಬರಹದ ಮೂಲಕ ಚೈಲ್ಡ್‌ಲೈನ್ ಮಾಹಿತಿಯನ್ನು ಪ್ರದರ್ಶಿಸುವುದರ ಮೂಲಕ ತುರ್ತು ಸೇವೆ ಅಗತ್ಯವಿರುವ ಮಕ್ಕಳು ನೆರವನ್ನು ಪಡೆಯಲು ಅನುಕೂಲವಾಗುತ್ತದೆ. ಆದ್ದರಿಂದ ತಮ್ಮ ಇಲಾಖಾ ವ್ಯಾಪ್ತಿಗೆ ಬರುವ ಎಲ್ಲಾ ವಸತಿಗೃಹಗಳ ಮೇಲೆ ಗೋಡೆ ಬರಹದ ಮೂಲಕ ಮಕ್ಕಳ ಸಹಾಯವಾಣಿ ಕುರಿತು ವ್ಯಾಪಕ ಪ್ರಚಾರ ನೀಡಲು ಕ್ರಮ ಕೈಗೊಳ್ಳಲು ಕೋರಿದೆ. (ಪ್ರದರ್ಶಿಸಬೇಕಾದ ಮಾಹಿತಿಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ)

ತಮ್ಮ ವಿಶ್ವಾಸಿ,
ಅರುಂಧತಿ 14/8/19
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಯನ್ನು

1) ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
2) **Head, South Regional Resource Cener Child Line India Foundtion, T.Nagar, Chennai-600017.**
3) ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ, ಈ ಸಂಬಂಧ ಅನುಸರಣೆ ಮಾಡಲು ತಿಳಿಸಿದೆ